

ಚೌಕವನ್ನು, ಅಲ್ಲಿ ನೆಲದ ಮೇಲೆ ವಿವಿಧ ದೇಶಗಳ ಧ್ವಜಗಳು ಇರುತ್ತವೆ, ಅಲ್ಲಿನ ಧ್ವಜಗಳೇ ನಮ್ಮ ಅಪ್ಪಯ್ಯನ ಬದುಕಿನಲ್ಲಿ ದೊಡ್ಡ ಪಲ್ಲಟವನ್ನು ಉಂಟು ಮಾಡಿದ್ದು!' ಎಂದು ಹೇಳಿದಳು ಶಾರ್ವರಿ.

ಇವಳ ಮಾತಿನಿಂದ ಕಾರಿನಲ್ಲಿದ್ದವರು ಮತ್ತಷ್ಟು ಅಚ್ಚರಿಗೆ ಒಳಗಾದದ್ದು ಮಾತ್ರವಲ್ಲ ಇವಳಿಗೆಲ್ಲೋ ಹುಚ್ಚೋ, ಭ್ರಮೆಯೋ ಹಿಡಿದಿರಬೇಕು ಎಂದು ಕೊಂಡರು.

ಇವರ ಮನದ ಮಾತನ್ನು ಕೇಳಿಸಿಕೊಂಡವಳಂತೆ ಶಾರ್ವರಿ 'ನೀವು ಅಂದುಕೊಂಡಂತೆ ನನಗೆ ಹುಚ್ಚೂ ಇಲ್ಲ, ಭ್ರಮೆಯೂ ಇಲ್ಲ. ಆ ರಸ್ತೆಯಲ್ಲಿ ಧ್ವಜಗಳು ಕಾಣಿಸುವುದು ಅಪ್ಪಯ್ಯನಿಗೆ, ನನಗಲ್ಲ. ಆ ಧ್ವಜಗಳು ಅಪ್ಪಯ್ಯನಿಗೆ ಕಾಣುತ್ತಿರುವವರೆಗೆ ನಾನು ಮುಂದೆ ಸಾಗುವಂತಿಲ್ಲ. ನಿಂತಲ್ಲಿಯೇ ನಿಂತಿರಬೇಕು, ಧ್ವಜ ಅವರ ಕಣ್ಣೆದುರಿನಿಂದ ಕಾಣೆಯಾಗುತ್ತಿದ್ದಂತೆ ಅವರು ನನಗೆ ಸಂಜ್ಞೆ ಮಾಡುತ್ತಾರೆ. ಆಗ ನಾನು ಮುಂದೆ ಸಾಗಬೇಕು. ಇದು ಅಪ್ಪಯ್ಯನ ಅಲಿಖಿತ ಆದೇಶ. ಅದನ್ನು ನಾನು ಹಲವು ವರ್ಷಗಳಿಂದ ಪಾಲಿಸಿಕೊಂಡು ಬಂದಿದ್ದೇನೆ.

'ನಾನು ಯಾವ ಧ್ವಜದ ಮೇಲೆ ಸಾಗುತ್ತೇನೋ ಆ ದೇಶದ ಪಾಲಾಗುತ್ತೇನೆ ಎಂದೇ ಭಾವಿಸುತ್ತಾರೆ ಅಪ್ಪಯ್ಯ. ಇದು ಅವರ ಮನದ ಭ್ರಮೆ ಎಂದು